ಇನ್ನಿತರ ಸಭೆ ಸಮಾರಂಭಗಳಲ್ಲಿ ಮಾಳಪ್ಪ ಶ್ಯಾನುಭೋಗರಿಗೆ ಅಧ್ಯಕ್ಷರ ಪಕ್ಕದಲ್ಲಿ ಒಂದು ಖುರ್ಚಿ ಇಟ್ಟೇಇಡುತ್ತಿದ್ದರು. ಹೀಗಾಗಿ ಎಲ್ಲರೂ ಅವರ ಪ್ರತ್ಯಕ್ಷ ಸಹವಾಸಕ್ಕೆ ಬರದಿದ್ದರೂ ಅವರನ್ನು ಚೆನ್ನಾಗಿ ಅರಿತಿದ್ದರು. ಹೀಗಾಗಿ ಅವರು ಸತ್ತ ಸುದ್ದಿ ಕೇಳಿ ಊರಿಗೇ ಊರೇ ಮರುಗಿತು. ಅವರು ವರ್ಗವಾಗಿ ಹೋಗುವಾಗ ಬೀಳ್ಕೊಡುವ ಸಮಾರಂಭದ ಹೊತ್ತಿಗೆ ಕುಮಟೆಯಿಂದ ಫೋಟೊಗ್ರಾಫರು ಗುಣವಂತನನ್ನು ಕರೆಸಿ ತೆಗೆಸಿದ ಸಮೂಹ ಛಾಯಾಚಿತ್ರ ಊರಿನ ಗ್ರಾಮ ಪಂಚಾಯತಿಯ ಆಫೀಸಿನಲ್ಲಿಯೂ, ಅಟ್ಟದ ಗ್ರಾಮ ಚಾವಡಿಯಲ್ಲಿಯೂ ತೂಗಹಾಕಿದ್ದರು. ಮೂರು ತಿಂಗಳ ಹಿಂದೆ ಬೀಳ್ಕೊಟ್ಟ ಸಭೆ ಅಂದು ಶೋಕ ಸಭೆಯನ್ನು ಕೂಡಿಸಿತು, ಸಮೂಹ ಚಿತ್ರಕ್ಕೇ ಹಾರಹಾಕಿ ಸರಪಂಚರ ಅಧ್ಯಕ್ಷತೆಯಲ್ಲಿ ಕೂಡಿದ ಶೋಕಸಭೆ ಮಾಳಪ್ಪ ಶ್ಯಾನುಭೋಗರ ಗುಣಗಾನ ಮಾಡಿತು. ಒಬ್ಬಿಬ್ಬರು ಮೇಜನ್ನು ಗುದ್ದಿ ಮಂದಿಯ ಅಂತಃಕರಣಕ್ಕೆ ಮುಟ್ಟುವ ಹಾಗೆ ಮಾತನಾಡಿದರು. ಕಣ್ಣೀರು ಬಿಟ್ಟು ಆರಿದನಂತರ ಸಭೆ ಕೊನೆಗೊಂಡಿತು.

ಇಷ್ಟಾದರೂ ಹೆಂಗಸರ ಮಾತು ನಿಂತಿರಲಿಲ್ಲ. ಮುರ್ಕುಂಡಿ ದೇವಸ್ಥಾನಕ್ಕೆ ಹೋಗುವ ರಸ್ತೆ ಕವಲೊಡೆದ ನಾಲ್ಕು ದಾರಿಯ ನಡುವೆ ಅಶ್ವತ್ಥ ಕಟ್ಟೆಯ ಎದುರು ದಿಗಂಬರ ಶೆಟ್ಟಿಯ ವಿಧವೆ ಸೀತಕ್ಕ ಉಗ್ರಾಣಿ ಬೀರಪ್ಪನೊಡನೆ ಇದೇ ಮಾತನ್ನು ಹೇಳಿ ಕಣ್ಣೀರುಗರೆಯುತ್ತಿದ್ದಳು. ಸೀತಕ್ಕನ ಕರುಳು ಕರಗುವಂತಹ ಆ ಮಾತುಗಳು ಉಗ್ರಾಣಿಯ ಸಾಂತ್ವನೆಗೂ ಮೀರಿ ಇಬ್ಬರೂ ಬುಳು ಬುಳು ಎಂದು ಅತ್ತು ಅಲ್ಲಿಂದ ಹೋಗಿಬಿಟ್ಟರು. ಸೀತಕ್ಕ ಹಾಗೆಯೇ ಸೀದಾ ಮನೆಗೆ ಬಂದಳು. ಏನೂ ಬೇಡ ಎಂದೆನಿಸಿ ಅವಲಕ್ಕಿಯ ರಾಟಿಯ ಪಕ್ಕದಲ್ಲಿ ಚಾಪೆ ಹಾಸಿ ಅಡ್ಡಾದಳು.

ಸೀತಕ್ಕನಿಗೆ ಶ್ಯಾನುಭೋಗರ ಸಲಿಗೆ ಬಹಳವಿತ್ತು. ಊರಲ್ಲಿ ಇದ್ದಾಗ ಮಾಳಪ್ಪ ಶ್ಯಾನುಭೋಗರು ಅವಳ ಮನೆಗೆ ಆಗಾಗ್ಗೆ ಬರುತ್ತಿದ್ದರು. ಅವಳ ಸುಖ ದುಃಖ ಕೇಳಿ ಅವಳಿಗೆ ಬೇಕಾದ ಹಾಗೆ ಕೆಲಸದಲ್ಲಿ ನೆರವು ಆಗುತ್ತಿದ್ದರು. ಒಂದೇ ಜಾತಿಯಲ್ಲವೇ. ಶಿರ್ಶಿ ತಾಲೂಕಿನಲ್ಲಿಯ ಸಂಪಖಂಡದ ಸಾಲೆಯಲ್ಲಿ ಮಾಸ್ತರಿಕೆ ಮಾಡುವ ಅವಳ ಮಗಳಿಗೆ ಪತ್ರಗಳನ್ನು ಕೂಡಾ ಶ್ಯಾನುಭೋಗರು ಬರೆದುಕೊಡುತ್ತಿದ್ದರು. ಹೀಗಾಗಿ ಶ್ಯಾನುಭೋಗರ ಸಾವು ಸೀತಕ್ಕನ ಕುರಿತು ಒಂದು ವಿಶೇಷ ನೋವನ್ನು ತರುವಂತಹದಾಗಿತ್ತು. ಸೀತಕ್ಕನ ಮಗಳಿಗೆ ಒಲಿದು ಶ್ಯಾನುಭೋಗರು ಅಷ್ಟು ಸೀತಕ್ಕನ ಕೆಲಸದಲ್ಲಿ ನೆರವಾಗುತ್ತಾರೆಂದು ಊರಲ್ಲಿ ಒಮ್ಮೆ ಗುಲ್ಲು ಕೂಡ ಹಬ್ಬಿತ್ತು. ಈ ಮಾತು ಸೀತಕ್ಕನ ಕಿವಿಯ ಮೇಲಿಂದ ಹಾಯದೇನೂ ಇರಲಿಲ್ಲ. ಆದರೆ ಅದು ಅವಳಿಗೆ ಬೇಡವಾದ ಮಾತಾಗಿರಲಿಲ್ಲ. ಕಿವಿಯಿಂದ ಹಾದ ಸುದ್ದಿ ಮೆಚ್ಚುಗೆಯದಾಗಿ ಅವಳ ಮನಸ್ಸಿನ ಒಳಗೂ ಇಳಿಯುತ್ತಿತ್ತು. ಸೀತಕ್ಕನಿಗೂ ಅವರ ಸ್ವಭಾವ ಹಿಡಿಸಿತ್ತು. ತನ್ನ ಮಗಳಿಗೆ ಮದುವೆ ಮಾಡಿ ಕೊಟ್ಟರೆ ಹೇಗೆ ಎಂಬ ವಿಚಾರವೂ ಆಗಾಗ್ಗೆ ಹೊಳೆದುಹೋಗುತ್ತಿತ್ತು. ಹೀಗಾಗಿ ಸೀತಕ್ಕನ ಒಲವು ಮಾಳಪ್ಪ ಶ್ಯಾನುಭೋಗರಲ್ಲಿ ಬೆಳೆಯುತ್ತಲೇ ಇತ್ತು. ಒಳ್ಳೆಯ ಮನುಷ್ಯ, ಸರಕಾರಿ ನೌಕರಿ ಇದೆ; ಮೇಲಾಗಿ ನಾಲ್ಕು ಮಂದಿಗೆ ಬೇಕಾದವ, ಅಂದಮೇಲೆ ಸೀತಕ್ಕನಂಥವಳ ಮನಸ್ಸು ಅತ್ತ ಹರಿದರೆ ಆಶ್ಚರ್ಯವೇನು? ಶ್ಯಾನುಭೋಗರಾದರೂ ಒಂದೆರಡು ಸರತಿ ಗೋಡೆಯ ಮೇಲೆ ತೂಗು ಹಾಕಿದ ಅವಳ ಮಗಳ ಫೋಟೋ ನಿರೀಕ್ಷಿಸುತ್ತಿದಾಗ ಆಕಸ್ಮಾತ್ತಾಗಿ ಸೀತಕ್ಕನ ಧ್ಯಾನವೂ ಅತ್ತ ಹೊರಳಿತ್ತು. ಹೀಗಾಗಿ ತಾನೇ ಬಾಯಿ ತೆರೆದು ಪ್ರಸ್ತಾಪಿಸಿದರೆ ಬೇಡವೆನ್ನಲಿಕ್ಕಿಲ್ಲ ಅನ್ನುವ ಸಂಗತಿಯೂ ಅವಳಿಗೆ ಗೊತ್ತಿತ್ತು. ಯಾವುದಕ್ಕೂ ದೀಪಾವಳಿಯ ರಜೆಯಲ್ಲಿ ಮಗಳು ಬಂದಾಗ ಮಾತೆತ್ತಬೇಕೆಂದು ಅವಳು ಸುಮ್ಮನಿದ್ದಳು. ಹೀಗಿದ್ದು ದೀಪಾವಳಿಯ ರಜೆಯ ದಿನಗಳಿಗಾಗಿ ಕಾಯುತ್ತಿದ್ದಳು ಸೀತಕ್ಕ. ಅಷ್ಟರಲ್ಲಿಯೇ ನಡುವೆ ಶ್ಯಾನುಭೋಗರ ವರ್ಗಾವರ್ಗಿಯ ಅಪ್ಪಣೆ ಬಂದಿತ್ತು. ಆದರೂ ಮಗಳು